## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಶ್ರೀ ಹೆಚ್.ವೀರಪ್ಪ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಹಾಲಿ ನಿವೃತ್ತ) ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಕೂಡ್ಲಗಿ ಮತ್ತು ಶ್ರೀ ಎಂ.ಬಸವನಗೌಡ, ಹಿಂದಿನ ಕಿರಿಯ ಇಂಜಿನಿಯರ್ ಇವರ ವಿರುದ್ಧದ ಆರೋಪಗಳ ಕುರಿತು ಮಾನ್ಯ ಉಪಲೋಕಾಯುಕ್ತರ ತನಿಖೆ- ಪ್ರಕರಣವನ್ನು ವಿವರವಾದ ಇಲಾಖಾ ವಿಚಾರಣೆಗೆ ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಬಗ್ಗೆ-ಆದೇಶ.

**ಓದಲಾಗಿದೆ:**

1. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬೆಂಗಳೂರು ಇವರ ಅ.ಸ.ಪ.ಸಂಖ್ಯೆ:ಕಂಪ್ಲೇಟ್/ಉಪಲೋಕ್/ಜಿಎಲ್‌ಬಿ-4273/2015/ಡಿಆರ್‌ಇ-1, ದಿನಾಂಕ:27.11.2018

2. ಮಾನ್ಯ ಉಪ ಲೋಕಾಯುಕ್ತರವರ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ವರದಿ ಸಂಖ್ಯೆ: ಕಂಪ್ಲೇಟ್/ಉಪಲೋಕ್/ಜಿಎಲ್‌ಬಿ-4273/2015/ಡಿ.ಆರ್.ಇ-1, ದಿನಾಂಕ:20.11.2018

**ಪ್ರಸ್ತಾವನೆ:-**

ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬೆಂಗಳೂರು ರವರು ಮೇಲೆ ಓದಲಾದ ಕ್ರಮ ಸಂಖ್ಯೆ(1) ರ ದಿನಾಂಕ:27.11.2018 ರ ಅರೆ ಸರ್ಕಾರಿ ಪತ್ರದ ಜೊತೆ ಮೇಲೆ ಕ್ರಮ ಸಂಖ್ಯೆ(2) ರಲ್ಲಿ ಓದಲಾದ ಮಾನ್ಯ ಉಪ ಲೋಕಾಯುಕ್ತರವರ ದಿನಾಂಕ:20.11.2018 ರ ಲೋಕಾಯುಕ್ತ ಕಾಯ್ದೆ ಕಲಂ 12(3)ರ ವರದಿ ಹಾಗೂ ಇತರೆ ದಾಖಲೆಗಳನ್ನು ಲಗತ್ತಿಸಿ, ಸರ್ಕಾರಕ್ಕೆ ಕಳುಹಿಸಿ ಮಾನ್ಯ ಉಪ ಲೋಕಾಯುಕ್ತರವರ ವರದಿಯನುಸಾರ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಪರಿಶೀಲಿಸಲಾಗಿ, ಶ್ರೀ ಹೆಚ್.ಗೋಪಾಲರೆಡ್ಡಿ ಬಿನ್ ಹನುಮಂತರೆಡ್ಡಿ, ಕೆ.ರಾಯಪುರ ಗ್ರಾಮ ಕೂಡ್ಲಗಿ ತಾಲ್ಲೂಕು ಇವರು ಲೋಕಾಯುಕ್ತ ಕಛೇರಿಗೆ ಸಲ್ಲಿಸಿದ್ದ ದೂರಿನಲ್ಲಿ ಕೆ.ರಾಯಪುರ ಗ್ರಾಮದಲ್ಲಿ 2013-14 ನೇ ಸಾಲಿನಲ್ಲಿ ಸುವರ್ಣ ಗ್ರಾಮ ಯೋಜನೆಯಡಿ, ಸಿ.ಸಿ ರಸ್ತೆ, ಬಾಕ್ಸ್ ಚರಂಡಿ, ಸಮುದಾಯ ಭವನ, ಅಂಗನವಾಡಿ ಕಟ್ಟಡ ಹಾಗೂ ಕಾಂಪೌಂಡ್ ಕಾಮಗಾರಿಯನ್ನು ಕಳಪೆ ಮಟ್ಟದ ಸಾಮಗ್ರಿಗಳನ್ನು ಬಳಸಿ ಅನುಷ್ಠಾನಗೊಳಿಸಲಾಗಿದ್ದು ಇದಕ್ಕೆ ಶ್ರೀ ಎಂ.ಬಸವನಗೌಡ, ಕಿರಿಯ ಇಂಜಿನಿಯರ್ ಇವರು ಕಾರಣರಾಗಿರುತ್ತಾರೆ ಎಂದು ಆರೋಪಿಸಿದ್ದರ ಕುರಿತು ಮಾನ್ಯ ಉಪಲೋಕಾಯುಕ್ತರು ನಿಯಮಾನುಸಾರ ತನಿಖೆ ಕೈಗೊಂಡು ಕಲಂ 12(3) ರ ವರದಿಯೊಂದಿಗೆ ಕೆಲವೊಂದು ದಾಖಲೆಗಳನ್ನು ಸಲ್ಲಿಸಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರು ಸಲ್ಲಿಸಿರುವ ಕಲಂ 12(3) ರ ವರದಿಯಲ್ಲಿ 2013-14 ನೇ ಸಾಲಿನಲ್ಲಿ ಕೂಡ್ಲಗಿ ತಾಲ್ಲೂಕಿನ ಕೆ.ರಾಯಪುರ ಗ್ರಾಮದಲ್ಲಿ ಸುವರ್ಣ ಗ್ರಾಮ ಯೋಜನೆಯಲ್ಲಿ ರೂ.36.64 ಲಕ್ಷಗಳಿಗೆ ಸಿಮೆಂಟ್ ಕಾಂಕ್ರಿಟ್ ರಸ್ತೆ ನಿರ್ಮಾಣ, ಕಾಂಕ್ರಿಟ್ ಚರಂಡಿ ನಿರ್ಮಾಣ, ಸಮುದಾಯ ಭವನ ಕಟ್ಟಡ ನಿರ್ಮಾಣ, ಅಂಗನವಾಡಿ ಕೇಂದ್ರಕ್ಕೆ ಅಡುಗೆ ಕೋಣೆ ನಿರ್ಮಾಣ ಮತ್ತು ಅಂಗನವಾಡಿ ಕೇಂದ್ರಕ್ಕೆ

---2

ಕಾಂಪೌಂಡ್ ನಿರ್ಮಾಣ ಕಾಮಗಾರಿಯನ್ನು ಅನುಷ್ಠಾನಗೊಳಿಸಿರುವ ಬಗ್ಗೆ ಹಣ ಪಾವತಿಸಿದ್ದು ಸದರಿ ಕಾಮಗಾರಿಗಳ ಅನುಷ್ಠಾನದಲ್ಲಿ ಈ ಕೆಳಕಂಡ ಲೋಪಗಳು/ಹಣ ದುರುಪಯೋಗವಾಗಿರುವ ಬಗ್ಗೆ ಉಲ್ಲೇಖಿಸಲಾಗಿದೆ:-

1. ಕೂಡ್ಲಗಿ ತಾಲ್ಲೂಕಿನ ಕೆ.ರಾಯಪುರ ಗ್ರಾಮದಲ್ಲಿ ಸುವರ್ಣ ಗ್ರಾಮ ಯೋಜನೆಯಲ್ಲಿ ರೂ.36.64 ಲಕ್ಷಗಳಿಗೆ ಸಿಮೆಂಟ್ ಕಾಂಕ್ರಿಟ್ ರಸ್ತೆ ನಿರ್ಮಾಣ, ಕಾಂಕ್ರಿಟ್ ಚರಂಡಿ ನಿರ್ಮಾಣ, ಸಮುದಾಯ ಭವನ ಕಟ್ಟಡ ನಿರ್ಮಾಣ, ಅಂಗನವಾಡಿ ಕೇಂದ್ರಕ್ಕೆ ಅಡುಗೆ ಕೋಣೆ ನಿರ್ಮಾಣ ಮತ್ತು ಅಂಗನವಾಡಿ ಕೇಂದ್ರಕ್ಕೆ ಕಾಂಪೌಂಡ್ ನಿರ್ಮಾಣ ಕಾಮಗಾರಿಗೆ ಅನುಮೋದನೆ ಮಾಡಿರುವುದು ಕಂಡು ಬರುತ್ತದೆಯೆಂದು, ಸಿ.ಸಿ ರಸ್ತೆ ಕಾಮಗಾರಿಗೆ ಸಂಬಂಧಪಟ್ಟ ಅಂದಾಜು ಪಟ್ಟಿಯನ್ನು ಪರಿಶೀಲಿಸಿದಾಗ ಕ್ರಮ ಸಂಖ್ಯೆ (2) ರಲ್ಲಿ ರಸ್ತೆಯ ಪಕ್ಕದಲ್ಲಿ ಒಡ್ಡುಗಳನ್ನು ನಿರ್ಮಿಸಲು ಅಂದಾಜು ಪಟ್ಟಿ ತಯಾರಿಸಿರುವುದು ಕಂಡು ಬರುತ್ತಿದ್ದು, ಅದರೆ ಸದರಿ ಅಂದಾಜು ಪಟ್ಟಿಯಲ್ಲಿ ತಿಳಿಸಿರುವಂತೆ ಒಡ್ಡುಗಳನ್ನು ಮಾಡಿರುವುದು ಛಾಯಾ ಚಿತ್ರಗಳಿಂದ ಕಂಡು ಬರುವುದಿಲ್ಲವೆಂದು;
2. ಅಂದಾಜು ಪಟ್ಟಿಯ ಕ್ರಮಸಂಖ್ಯೆ 1 ರಿಂದ 7 ರ ತನಕ ಕಾಮಗಾರಿಗಳು ಆಗಿರುವ ಬಗ್ಗೆ ಅಳತೆ ಪುಸ್ತಕದಲ್ಲಿ ನಮೂದುಗಳು ಇದ್ದು ಅಂದಾಜು ಪಟ್ಟಿಯ ಕ್ರಮ ಸಂಖ್ಯೆ 8 ರಿಂದ 18 ರವರಗಿನ ಕಾಮಗಾರಿಗಳನ್ನು ಮಾಡಿರುವ ಬಗ್ಗೆ ಅಳತೆ ಪುಸಕ್ತದಲ್ಲಿ ಯಾವುದೇ ನಮೂದುಗಳು ಕಂಡು ಬರುತ್ತಿಲ್ಲವೆಂದು ಸಮುದಾಯ ಭವನದ ಛಾಯಾ ಚಿತ್ರವನ್ನು ಪರಿಶೀಲಿಸಿದಾಗ ಸಮುದಾಯ ಭವನ ಪೂರ್ಣವಾಗದೆ ಇರುವುದು ಕಂಡು ಬರುತ್ತಿದ್ದು ಕಿಟಕಿಗಳನ್ನು ಅಳವಡಿಸದೆ ಇರುವುದು ಕಂಡು ಬರುತ್ತದೆಯೆಂದು ಹಾಗೂ ತನಿಖಾ ವರದಿಯನ್ನು ಪರಿಶೀಲಿಸಿದಾಗ ಸಮುದಾಯ ಭವನ ಪೂರ್ಣಗೊಂಡಿರುವುದಿಲ್ಲವೆಂದು ಹೇಳಿರುವುದು ಕಂಡು ಬರುತ್ತದೆಯೆಂದು;
3. ಅಂದಾಜು ಪಟ್ಟಿಯಲ್ಲಿ ಅಡುಗೆ ಕೋಣೆ ನಿರ್ಮಾಣಕ್ಕೆ ಅವಕಾಶ ಮಾಡಿಕೊಂಡಿದ್ದು ಅಳತೆ ಪುಸ್ತಕದಲ್ಲಿ ಅಡುಗೆ ಕೋಣೆ ನಿರ್ಮಾಣಕ್ಕೆ ಸಂಬಂಧಪಟ್ಟಂತೆ ಯಾವುದೇ ಅಳತೆ ನಮೂದಿಸಿರುವುದು ಕಂಡು ಬರುತ್ತಿಲ್ಲವೆಂದು ಸದರಿ ಅಂಶಗಳನ್ನು ಗಮನಿಸಿದಾಗ ಅಡುಗೆ ಕೋಣೆಗೆ ಮಂಜೂರಾತಿ ದೊರೆತ್ತಿದ್ದರೂ ಸಹ ಅಡುಗೆ ಕೋಣೆ ನಿರ್ಮಾಣ ಮಾಡದೆ ಕರ್ತವ್ಯ ಲೋಪವೆಸಗಲಾಗಿದೆಯೆಂದು;
4. ಅಂಗನವಾಡಿ ಕೇಂದ್ರಕ್ಕೆ ಕಾಂಪೌಂಡ್ ನಿರ್ಮಾಣ ಕಾಮಗಾರಿಗೆ ಸಂಬಂಧಪಟ್ಟಂತೆ ರೂ.1.00 ಲಕ್ಷಕ್ಕೆ ಅಂದಾಜು ಪಟ್ಟಿ ತಯಾರಿಸಿದ್ದು ಅಂದಾಜು ಪಟ್ಟಿ ಮತ್ತು ಅಳತೆ ಪುಸ್ತಕಗಳನ್ನು ತಾಳೆ ನೋಡಲಾಗಿ ಅಂದಾಜು ಪಟ್ಟಿಯಲ್ಲಿನ ಕ್ರಮ ಸಂಖ್ಯೆ:1, 2,3 ಮತ್ತು 4 ಕ್ಕೆ ಸಂಬಂಧಪಟ್ಟಂತೆ ನಮೂದುಗಳು ಅಳತೆ ಪುಸ್ತಕದಲ್ಲಿ ಕಂಡು ಬರುತ್ತಿದ್ದು ಅಂದಾಜು ಪಟ್ಟಿಯ ಕ್ರಮಸಂಖ್ಯೆ:5,6,7 ಮತ್ತು 8 ರ ಕಾಮಗಾರಿಗಳನ್ನು ನಿರ್ವಹಿಸಿದ ಬಗ್ಗೆ ಅಳತೆ ಪುಸ್ತಕದಲ್ಲಿ ಯಾವುದೇ ನಮೂದುಗಳು ಇರುವುದಿಲ್ಲವೆಂದು;
5. ಸಿಮೆಂಟ್ ಕಾಂಕ್ರಿಟ್ ರಸ್ತೆ ನಿರ್ಮಾಣಕ್ಕೆ ಸಂಬಂಧಪಟ್ಟಂತೆ ಅಂದಾಜು ಪಟ್ಟಿಯ ಕ್ರಮ ಸಂಖ್ಯೆ 1ರಲ್ಲಿರುವ ಕಾಮಗಾರಿಯನ್ನು ಮಾಡದೆ ಇರುವುದು ಕಂಡು ಬರುತ್ತದೆಯೆಂದು. ಸದರಿ ಕಾಮಗಾರಿಗೆ ಅಂದಾಜು ಪಟ್ಟಿಯಂತೆ ರೂ. 51,956/- ಗಳನ್ನು ನಿಗಧಿಪಡಿಸಿದ್ದು ಸದರಿ ಮೊತ್ತವನ್ನು ದುರಪಯೋಗ ಮಾಡಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆಯೆಂದು;
6. ಕ್ರಮ ಸಂಖ್ಯೆ 8 ರಿಂದ 18 ರವರಗಿನ ಕಾಮಗಾರಿಗಳನ್ನು ಮಾಡಿರುವ ಬಗ್ಗೆ ನಮೂದುಗಳು ಅಳತೆ ಪುಸ್ತಕದಲ್ಲಿ ಇರುವುದಿಲ್ಲವೆಂದು ಸದರಿ ಕಾಮಗಾರಿಗಳಿಗೆ ನಿಗಧಿಪಡಿಸಿದ ಒಟ್ಟು ಮೊತ್ತ ರೂ. 3,50,268/- ಗಳು ದುರುಪಯೋಗವಾಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆಯೆಂದು;
7. ಅಂಗನವಾಡಿ ಕೇಂದ್ರದ ಅಡಿಗೆ ಕೋಣೆ ನಿರ್ಮಾಣಕ್ಕೆ ರೂ.2.50 ಲಕ್ಷ ನಿಗಧಿಪಡಿಸಿರುವುದು ಕಂಡು ಬರುತ್ತದೆಯೆಂದು, ಅಂಗನವಾಡಿ ಕೇಂದ್ರಕ್ಕೆ ಕಾಂಪೌಂಡ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ಅಂದಾಜು ಪಟ್ಟಿಯ ಕ್ರಮ ಸಂಖ್ಯೆ:5 ರಿಂದ 8 ರ ಕಾಮಗಾರಿಗಳ ಬಗ್ಗೆ ಅಳತೆ ಪುಸ್ತಕದಲ್ಲಿ ನಮೂದು ಇಲ್ಲದೆ ಇರುವುದು ಕಂಡು ಬರುತ್ತಿದ್ದು ಅವುಗಳಿಗೆ ನಿಗಧಿಪಡಿಸಲಾದ ಮೊತ್ತ ರೂ.1,21,433/- ಗಳು ದುರುಪಯೋಗವಾಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆಯೆಂದು.

---3

ಮಾನ್ಯ ಉಪಲೋಕಾಯುಕ್ತರು ಮೇಲಿನಂತೆ ಕಾಮಗಾರಿಗಳನ್ನು ಅಂದಾಜು ಪಟ್ಟಿಯಂತೆ ಅನುಷ್ಠಾನ ಮಾಡಿರುವುದಿಲ್ಲವೆಂದು ಅದರೆ ಸದರಿಯವರು ಸಲ್ಲಿಸಿರುವ ಆಕ್ಷೇಪಣೆಗಳಲ್ಲಿ ಎಲ್ಲಾ ಕಾಮಗಾರಿಗಳನ್ನು ಮಾಡಲಾಗಿದೆ ಹಾಗೂ ಅದರನುಸಾರ ಗುತ್ತಿಗೆದಾರರಿಗೆ ಹಣ ಪಾವತಿಸಲಾಗಿದೆಯೆಂದು ಹೇಳಿದ್ದು, ಆಪಾದಿತರು/ಎದುರುದಾರರು ಮೇಲೆ ತಿಳಿಸಿರುವಂತೆ ಕೆಲವೊಂದು ಕಾಮಗಾರಿ/ ಐಟಂಗಳನ್ನು ಮಾಡದೆ ರೂ.5,23,657/- ಗಳನ್ನು ದುರುಪಯೋಗಪಡಿಸಿಕೊಂಡಿರುವುದು ಕಂಡು ಬರುತ್ತದೆಯೆಂದು ಅವರು ನೀಡಿರುವ ವಿವರಣೆಯು ಆರೋಪಗಳನ್ನು ಅಲ್ಲಗೆಳೆಯಲು ಸೂಕ್ತ ಹಾಗೂ ಸಮಾಧನಕರವಾಗಿರುವುದಿಲ್ಲವೆಂದು ಎದರುದಾರರು/ಆಪಾದಿತರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು ಅವರ ಕಾರ್ಯನಿರ್ವಹಣೆಯಲ್ಲಿ ಪೂರ್ಣ ಪ್ರಮಾಣದ ಪ್ರಾಮಾಣಿಕ, ಶ್ರದ್ದೆ ತೋರಿಸಿದೆ ಸರ್ಕಾರಿ ನೌಕರರಿಗೆ ತರವಲ್ಲದ ರೀತಿ ವರ್ತಿಸಿರುವುದು ಕಂಡು ಬರುವುದರಿಂದ ಅವರ ವಿರುದ್ದ ವಿವರವಾದ ಇಲಾಖಾ ವಿಚಾರಣೆಯನ್ನು ನಡೆಸಲು ತಮಗೆ ವಹಿಸುವಂತೆ ಕೋರಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ಕಲಂ 12(3) ರ ವರದಿಯನ್ನು ಹಾಗೂ ಇತರೆ ದಾಖಲೆಗಳನ್ನು ಪರಿಶೀಲಿಸಿರುತ್ತದೆ. ಎದರುದಾರರು/ಆಪಾದಿತರಾದ ಶ್ರೀ ಹೆಚ್.ವೀರಪ್ಪ, ಹಿಂದಿನ ಸ.ಕಾ.ಇಂ, ಮತ್ತು ಶ್ರೀ ಎಂ.ಬಸವನಗೌಡ, ಕಿ.ಇಂ ಇವರು ಕೂಡ್ಲಗಿ ತಾಲ್ಲೂಕಿನ ಕೆ.ರಾಯಪುರ ಗ್ರಾಮದಲ್ಲಿ ಸುವರ್ಣ ಗ್ರಾಮ ಯೋಜನೆಯಡಿ ಕೈಗೊಳ್ಳಲಾದ ವಿವಿಧ ಕಾಮಗಾರಿಗಳ ಉಸ್ತುವಾರಿಯನ್ನು ವಹಿಸಿದ್ದು, ಅದರೆ ಅವುಗಳನ್ನು ಮಂಜೂರಾದ ಅಂದಾಜು ಪಟ್ಟಿಯನುಸಾರ ಅನುಷ್ಠಾನಗೊಳಿಸಿರುವುದು ಮಾನ್ಯ ಉಪಲೋಕಾಯುಕ್ತರ ವರದಿಯ ಹಿನ್ನಲೆಯಲ್ಲಿ ಅನುಮಾನಸ್ಪದವಾಗಿರುತ್ತದೆ ಹಾಗೂ ಕೆಲವೊಂದು ಕಾಮಗಾರಿ/ಐಟಂಗಳನ್ನು ಅನುಷ್ಠಾನಗೊಳಿಸದೆ ಹಣ ಪಾವತಿಸಿ, ದುರುಪಯೋಗ ಪಡಿಸಿಕೊಂಡಿರುವ ಸಾಧ್ಯತೆಗಳು ಮೇಲ್ನೋಟಕ್ಕೆ ಕಂಡು ಬರುತ್ತದೆ. ಈ ರೀತಿಯಾಗಿ ಎದರುದಾರರು/ಆಪಾದಿತರಾದ ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು ಅವರ ಕರ್ತವ್ಯ ಪಾಲನೆಯಲ್ಲಿ ಪೂರ್ಣ ಪ್ರಮಾಣದ ಕರ್ತವ್ಯ ನಿಷ್ಠೆ, ಪ್ರಾಮಾಣಿಕತೆ ತೋರದೆ ಸರ್ಕಾರಿ ನೌಕರರಿಗೆ ತರವಲ್ಲದ ರೀತಿ ವರ್ತಿಸಿ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1966 ನಿಯಮ 3(1)ನ್ನು ಉಲ್ಲಂಘಿಸಿರುವುದು ಕಂಡು ಬಂದಿರುತ್ತದೆ.

ಆದ್ದರಿಂದ, ಪ್ರಸಕ್ತ ಪ್ರಕರಣದಲ್ಲಿ ಶ್ರೀ ಹೆಚ್.ವೀರಪ್ಪ, ಹಿಂದಿನ ಸ.ಕಾ.ಇಂ, ಮತ್ತು ಶ್ರೀ ಎಂ.ಬಸವನಗೌಡ, ಕಿ.ಇಂ ಇವರುಗಳ ವಿರುದ್ದ ಕಂಡು ಬಂದಿರುವ ಆರೋಪಗಳ ಕುರಿತು ವಿವರವಾದ ಇಲಾಖಾ ವಿಚಾರಣೆಯನ್ನು ಕ.ನಾ.ಸೇ (ವ.ನಿ.ಮೇ) ನಿಯಮ 11 ರ ಅನುಸಾರ ಇಲಾಖಾ ವಿಚಾರಣೆಯನ್ನು ನಡೆಸುವುದು ಸೂಕ್ತವೆಂದು ಸರ್ಕಾರವು ನಿರ್ಧರಿಸಿರುತ್ತದೆ. ಆದ್ದರಿಂದ. ಈ ಆದೇಶ.

<u>ಆದೇಶ ಸಂಖ್ಯೆ:ಗ್ರಾಅಪ 107 ಇಎನ್‌ಕ್ಯೂ 18, ಬೆಂಗಳೂರು, ದಿನಾಂಕ:18.12.2018</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀ ಹೆಚ್. ವೀರಪ್ಪ ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಹಾಲಿ ನಿವೃತ್ತ) ಪಂಚಾಯತ್ ರಾಜ್ ಇಂಜಿನಿಯರಿಂಗ್

---4

ಉಪವಿಭಾಗ, ಕೂಡ್ಲಗಿ ಇವರ ವಿರುದ್ಧದ ಬಂದಿರುವ ಆರೋಪಗಳ ಕುರಿತು ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957 ರ ನಿಯಮ 11 ರಂತೆ ನಡೆಸಲು ತೀರ್ಮಾನಿಸಿದ್ದು, ಈ ಉದ್ದೇಶಕ್ಕೆ ಕರ್ನಾಟಕ ನಾಗರೀಕ ಸೇವಾ ನಿಯಮಗಳು 1958 ರ ನಿಯಮ 214 (2) (ಬಿ) (i) ರಂತೆ ಸರ್ಕಾರದ ಮಂಜೂರಾತಿ ನೀಡಿದೆ.

ಶ್ರೀ ಹೆಚ್.ವೀರಪ್ಪ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರನ್ನು ಒಳಗೊಂಡಂತೆ ಶ್ರೀ ಎಂ.ಬಸವನಗೌಡ, ಹಿಂದಿನ ಕಿರಿಯ ಇಂಜಿನಿಯರ್ ಇವರ ವಿರುದ್ಧದ ಆರೋಪಗಳ ಕುರಿತು ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957 ರ ನಿಯಮ 11 ರಡಿ ನಡೆಸಲು ಸದರಿ ನಿಯಮ 14-ಎ ರ ಅನುಸಾರ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಸಿದ್ದೇಶ ಪೂತಲಕಟ್ಟಿ)
ಸರ್ಕಾರದ ಉಪ ಕಾರ್ಯದರ್ಶಿ(ಆಡಳಿತ-1)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

<u>ಇವರಿಗೆ:</u>

1. ಮಹಾಲೇಖಪಾಲರು,(ಲೆಕ್ಕ ಪತ್ರ 1&2)/(ಆಡಿಟ್) ಕರ್ನಾಟಕ, ಬೆಂಗಳೂರು.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ.
5. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ) ಕೆ.ಆರ್.ವೃತ್ತ, ಬೆಂಗಳೂರು.
6. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ, (ಸೇವೆಗಳು-ಎ ಮತ್ತು ಸಿ).
7. ಸಂಬಂಧಿಸಿದ ಅಧಿಕಾರಿ/ನೌಕರರಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ. ರವರ ಮುಖಾಂತರ)
8. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರು
9. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ(ಪಂ.ರಾಜ್) /ಜಂಟಿ ಕಾರ್ಯದರ್ಶಿ/ ಇವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರು
10. ಶಾಖಾ ರಕ್ಷಾ ಕಡತ/ಕಂಪ್ಯೂಟರ್ ಸೆಲ್/ ಹೆಚ್ಚುವರಿ ಪ್ರತಿ.